# ಕುವೆಂಪು ವಿಶ್ವವಿದ್ಯಾಲಯ

## *ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ*
## ನಡಾವಳಿಗಳು

## ಸಭಾ ದಿನಾಂಕ : 15–06–2022

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:ಸಿಂ-6:22: 129 :2022-23 ದಿನಾಂಕ:23-06-2022

ಮಾನ್ಯರೆ,

ವಿಷಯ: ದಿನಾಂಕ:02-06-2022, 08-06-2022 ಹಾಗೂ 15-06-2022 ರಂದು ನಡೆದ ಸಿಂಡಿಕೇಟ್‌ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:02-06-2022 ಹಾಗೂ ದಿನಾಂಕ:08-06-2022 ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ:15-06-2022 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:15-06-2022 ರಂದು ಬುಧವಾರ ಅಪರಾಹ್ನ : 03.30 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಅಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 14. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು. | ಸದಸ್ಯರು |
| 15. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 17. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಸದಸ್ಯರಾದ ಶ್ರೀ ರಾಜಶೇಖರ್ ಹೆಬ್ಬಾರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಇವರನ್ನು ಸಭೆಗೆ ಪರಿಚಯಿಸಿ, ಆತ್ಮೀಯವಾಗಿ ಸ್ವಾಗತಿಸಿದರು. ಹಾಗೂ ಸಭೆಯಲ್ಲಿ ಹಲವು ಸಲಹೆ ಸೂಚನೆಗಳನ್ನು ನೀಡಿದ ನಿರ್ಗಮಿತ ಸದಸ್ಯರಾದ ಡಾ. ಅಶೋಕ್ ಡಿ. ರೇವಣ್‌ಕರ್‌ರವರಿಗೆ ಧನ್ಯವಾದಗಳನ್ನು ತಿಳಿಸಿದರು. 31 ಮತ್ತು 32ನೇ ಘಟಿಕೋತ್ಸವಗಳಲ್ಲಿ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ ಸಭೆಯನ್ನು ತುರ್ತಾಗಿ ಕರೆಯಲಾಗಿದೆ ಎಂದು ತಿಳಿಸುತ್ತಾ, ಸಭೆಯನ್ನು ಮುಂದುವರೆಸಲು ಮಾನ್ಯ ಕುಲಪತಿಗಳನ್ನು ಕೋರಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿದರು. ನೂತನ ಸದಸ್ಯರಾದ ಶ್ರೀ ರಾಜಶೇಖರ್ ಹೆಬ್ಬಾರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,

ಇವರು ನಿರ್ಗಮಿತ ಸದಸ್ಯರಾದ ಡಾ. ಅಶೋಕ್ ಡಿ. ರೇವಣ್‌ಕರ್‌ರವರಂತೆ ಸಹಕಾರ ನೀಡುವಂತೆ ಕೋರಿದರು.

ಮುಂದುವರೆದು ಮಾತನಾಡಿ 31ನೇ ಘಟಿಕೋತ್ಸವವನ್ನು ಈ ಹಿಂದೆಯೇ ನಡೆಸಬೇಕಾಗಿತ್ತು ಹಲವಾರು ತಾಂತ್ರಿಕ ಕಾರಣಗಳು, ಮುಖ್ಯ ಅತಿಥಿಗಳ ದಿನಾಂಕ ಹೊಂದಾಣಿಕೆಯ ಕೊರತೆಯಿಂದಾಗಿ ವಿಳಂಭವಾಗಿದ್ದು ಪ್ರಸ್ತುತ 31 ಮತ್ತು 32ನೇ ಘಟಿಕೋತ್ಸವವನ್ನು ದಿನಾಂಕ:16-06-2022 ರಂದು ಏರ್ಪಡಿಸಲಾಗಿರುತ್ತದೆ. ಸದರಿ ಘಟಿಕೋತ್ಸವ ಸಮಾರಂಭದಲ್ಲಿ ಗೌರವಾನ್ವಿತ ರಾಜ್ಯಪಾಲರು ಭಾಗವಹಿಸುತಿದ್ದು, ಸಮಾರಂಭವನ್ನು ವಿಶ್ವವಿದ್ಯಾಲಯದ ಹಬ್ಬದ ರೀತಿಯಲ್ಲಿ ಯಶಸ್ವಿಯಾಗಿ ನಡೆಸಲು ತಾವೆಲ್ಲರೂ ಸಹಕರಿಸಬೇಕೆಂದು ಕೋರಿದರು. ಸದರಿ ಸಮಾರಂಭದಲ್ಲಿ ಪದವಿ /ಪಿಹೆಚ್.ಡಿ ಪದವಿ ಪಡೆಯಲಿರುವ ವಿದ್ಯಾರ್ಥಿಗಳು, ಸ್ವರ್ಣಪದಕ/ನಗದು ಬಹುಮಾನ ಪಡೆಯಲಿದ್ದಾರೆ ಇದು ತುಂಬಾ ಸಂತೋಷದಾಯಕ ದಿನ, ಈ ಸಮಾರಂಭದಲ್ಲಿ 6 ಜನ ಸಾಧಕರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗುವುದು ಎಂದು ಹೇಳಿದರು. ಈ ವಿಶೇಷ ಸಭೆ ಕರೆಯಲು ಕಾರಣವೇನೆಂದರೆ ಮೊದಲನೆಯದಾಗಿ ಪದವಿ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳ ಪಟ್ಟಿ ಅನುಮೋದನೆ, ಎರಡನೆಯದಾಗಿ ಸರ್ಕಾರದ ನಿರ್ದೇಶನದ ಮೇರೆಗೆ ಕಾಲೇಜುಗಳ 2022-23ನೇ ಸಾಲಿನ ಸಂಯೋಜನಾ ವರದಿಗಳನ್ನು ಸಭೆಯಲ್ಲಿ ಅನುಮೋದಿಸಿ ತುರ್ತಾಗಿ ಸರ್ಕಾರಕ್ಕೆ ಕಳುಹಿಸಬೇಕಾಗಿದೆ ಎಂದು ಹೇಳಿದರು.

## ಪರೀಕ್ಷಾ ವಿಭಾಗ

**2022-ಸಿಂ-6.01:** ವಿಶ್ವವಿದ್ಯಾಲಯದ 31 ಮತ್ತು 32ನೇ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಹಾಗೂ ಇತರೆ ಪದವಿಗಳಿಗೆ ಅರ್ಹರಾದ ವಿದ್ಯಾರ್ಥಿಗಳ/ ಅಭ್ಯರ್ಥಿಗಳ ಪಟ್ಟಿ ಅನುಮೋದನೆ ಬಗ್ಗೆ.

**ಚರ್ಚೆ :** ಕುಲಸಚಿವರು(ಪರೀಕ್ಷಾಂಗ)ರವರು 31 ಹಾಗೂ 32ನೇ ಘಟಿಕೋತ್ಸವದಲ್ಲಿ ಪದವಿ/ಪಿಹೆಚ್.ಡಿ ಪದವಿ, ಸ್ವರ್ಣ ಪದಕ/ ನಗದು ಬಹುಮಾನ ಪಡೆಯಲು ಅರ್ಹರಾದ ಪಟ್ಟಿಯ ವಿವರಗಳನ್ನು ಸಭೆಗೆ ಮಂಡಿಸಿದರು. ಹಾಗೂ ಕವಿತಾ ಎಂ. ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರು ಅತೀ ಹೆಚ್ಚು ಅಂದರೆ 8 ಸ್ವರ್ಣಪದಕ ಹಾಗೂ 2 ನಗದು ಬಹುಮಾನಗಳನ್ನು ಪಡೆಯಲಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ವಿಶ್ವವಿದ್ಯಾಲಯದ 31 ಮತ್ತು 32ನೇ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಹಾಗೂ ಇತರೆ ಪದವಿಗಳಿಗೆ ಅರ್ಹರಾದ ವಿದ್ಯಾರ್ಥಿಗಳ/ ಅಭ್ಯರ್ಥಿಗಳ ಪಟ್ಟಿಯನ್ನು ಸಭೆಯು ಅನುಮೋದಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2022-ಸಿಂ-6.02:** ಕಾಲೇಜುಗಳ 2022-23ನೇ ಸಾಲಿನ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯ

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ದಿನಾಂಕ:09-06-2022ರಂದು ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳ ಸಭೆ ಕರೆದು ಸಭೆಯಲ್ಲಿ ಅತೀ ಶೀಘ್ರವಾಗಿ ದ್ವಿತೀಯ ಪಿ.ಯು.ಸಿ ಫಲಿತಾಂಶ ಪ್ರಕಟವಾಗಲಿದ್ದು, 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿಗೆ ಪ್ರವೇಶಾತಿಯನ್ನು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಆನ್ ಲೈನ್ ಮೂಲಕವೇ ಕಡ್ಡಾಯವಾಗಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ. ಈ ನಿಟ್ಟಿನಲ್ಲಿ ಎಲ್ಲಾ ಕಾಲೇಜುಗಳ 2022-23ನೇ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ದಿನಾಂಕ:15-06-2022ರೊಳಗೆ ಮುಕ್ತಾಯಗೊಳಿಸಿ, ಪ್ರಾಧಿಕಾರಗಳ ಅನುಮೋದನೆಯೊಂದಿಗೆ ದಿನಾಂಕ:18-06-2022ರೊಳಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿರುವುದರಿಂದ ಸಂಯೋಜನಾ ಪ್ರಕ್ರಿಯೆಗಳನ್ನು ನಿಯಮಾನುಸಾರ ನಡೆಸಿದ್ದು, ಈ ಸಂಬಂಧಿಸಿದಂತೆ ಸಂಯೋಜನಾ ವರದಿಗಳನ್ನು ಕ್ರೋಢೀಕರಿಸಲಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ವ್ಯಾಪ್ತಿಗೊಪಡುವ ಒಟ್ಟು 93 ಕಾಲೇಜುಗಳ ಸಂಯೋಜನಾ ವರದಿಯನ್ನು

ಸಿದ್ಧಪಡಿಸಲಾಗಿದೆ. ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದವರು ಹಾಗೂ ಎಲ್ಲಾ ಕಾಲೇಜಿನವರು ಮೂರು ದಿನಗಳಲ್ಲಿ ಬಹಳ ಶ್ರಮವಹಿಸಿ ಕರ್ತವ್ಯ ನಿರ್ವಹಿಸಿ ಕೆಲಸ ಪೂರ್ಣಗೊಳಿಸಲು ಸಹಕಾರ ನೀಡಿರುತ್ತಾರೆ ಎಂದರು.

ಸಿಂಡಿಕೇಟ್ ಸದಸ್ಯರುಗಳಾದ ಪ್ರಾಂಶುಪಾಲರುಗಳು ಮಾತನಾಡಿ ಸಂಯೋಜನಾ ಕಾರ್ಯವನ್ನು ಬಹಳ ಅಚ್ಚುಕಟ್ಟಾಗಿ ವಿಶ್ವವಿದ್ಯಾಲಯ ನಿರ್ವಹಿಸಿದೆ ಎಂದು ತಮ್ಮ ಧನ್ಯವಾದ ತಿಳಿಸಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಹೆಬ್ಬೂರು ಚಾರಿಟೇಬಲ್ ಟ್ರಸ್ಟ್ ಕಾಲೇಜಿನ ಬಗ್ಗೆ ತುಂಬಾ ದೂರುಗಳು ಇವೆ, ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆದಿದ್ದಾರೆ, ಕಾಲೇಜಿನ ಕಟ್ಟಡ, ಜಾಗ ಇತರೆ ಅಂಶಗಳ ಕುರಿತು ದೂರು ಸಲ್ಲಿಸಿದ್ದಾರೆ. ಈ ದೂರುಗಳ ಕುರಿತು ಕ್ರಮ ವಹಿಸಲಾಗಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ ಈ ಸಂಬಂಧ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಪರಿಶೀಲಿಸಿ ವರದಿ ನೀಡಿದ ನಂತರ ದೂರು ಸಾಬೀತಾದಲ್ಲಿ ಕ್ರಮ ಕೈಗೊಳ್ಳಲಾಗುವುದು. ಸದ್ಯಕ್ಕೆ ತಾತ್ಕಾಲಿಕ ಸಂಯೋಜನೆ ನೀಡಲಾಗಿದೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಸಂಯೋಜನೆ ನೀಡುವುದು ಒಂದು ಶೈಕ್ಷಣಿಕ ಪ್ರಕ್ರಿಯೆ, ದೂರುಗಳು ಬಂದಿದ್ದರೆ ಅವುಗಳನ್ನು ಪರಿಶೀಲಿಸಿ ದೂರುಗಳು ಸರಿ ಎಂದು ಕಂಡು ಬಂದಲ್ಲಿ ಅವುಗಳ ಬಗ್ಗೆ ಕ್ರಮ ಕೈಗೊಳ್ಳಬಹುದು ಅಲ್ಲಿಯವರೆಗೆ ಕಾಲೇಜಿನ ಸಂಯೋಜನೆ ತಡೆ ಹಿಡಿಯವುದು ಸರಿಯಲ್ಲ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ ಬಾಬುರವರು ಮಾತನಾಡಿ ಸಂಯೋಜನೆ ನೀಡುವುದು ಹಾಗೂ ಕಾಲೇಜು ಆಡಳಿತದ ಕುರಿತು ಬಂದಿರುವುದು ಎರಡೂ ಪ್ರತ್ಯೇಕ ವಿಷಯ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ.ಜಿ. ಧನಂಜಯ್‌ರವರು ಮಾತನಾಡಿ ಇವೆರಡೂ ಬೇರೆ ಬೇರೆ ವಿಷಯಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಯೋಜನೆ ತಡೆ ಹಿಡಿಯವುದು ಸಾಧ್ಯವಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು ನಮ್ಮ ಉದ್ದೇಶವಲ್ಲ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಈ ವಿಚಾರವಾಗಿ ಈಗಾಗಲೇ ಕಾರ್ಯಪ್ರವೃತ್ತರಾಗಿದ್ದೇವೆ ಮಧ್ಯದಲ್ಲಿ ಘಟಿಕೋತ್ಸವದ ದಿನಾಂಕ ನಿಗದಿಯಾಗಿರುವುದರಿಂದ ಹಾಗೂ ತುರ್ತಾಗಿ ಸಂಯೋಜನಾ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸರ್ಕಾರದಿಂದ ನಿರ್ದೇಶನ ಬಂದಿರುವುದರಿಂದ ಸಂಯೋಜನಾ ವರದಿ ನೀಡಬೇಕಾಗಿದೆ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಈಗಲೂ ಕೂಡ ಸದರಿ ಸಮಿತಿ ಕಾಲೇಜಿಗೆ ಭೇಟಿ ನೀಡಿ ದೂರುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ನೀಡಿದ ಬಳಿಕ ದೂರುಗಳು ಸರಿ ಇದೆ ಎಂದು ಕಂಡು ಬಂದಲ್ಲಿ, ಸರ್ಕಾರಕ್ಕೆ ವರದಿ ನೀಡಿ ನಿಯಮಾನುಸಾರ ಕಾಲೇಜಿನ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

**ನಿರ್ಣಯ:** ಚರ್ಚೆಯ ನಂತರ ಕಾಲೇಜುಗಳ 2022-23ನೇ ಸಾಲಿನ ಸಂಯೋಜನಾ ವರದಿಗಳನ್ನು ಸಭೆಯು ಅನುಮೋದಿಸಿತು.

**2022–ಸಿಂ–6.03:** ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಪರೀಕ್ಷಾಂಗ ವಿಭಾಗದ ಸಿಬ್ಬಂದಿಗಳು ಘಟಿಕೋತ್ಸವ ಸಮಾರಂಭಕ್ಕಾಗಿ ಹಗಲು ರಾತ್ರಿ ಕೆಲಸ ಮಾಡಿದ್ದಾರೆ ಅವರಿಗೆ ಸಭೆಯ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು. ಎಲ್ಲಾ ಸದಸ್ಯರೂ ಕೂಡ ಸಿಬ್ಬಂದಿಗಳಿಗೆ ತಮ್ಮ ಅಭಿನಂದನೆಯನ್ನು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಿಂಡಿಕೇಟ್ ಸದಸ್ಯರೂ ಆದ ಪ್ರೊ. ರಿಯಾಜ್ ಮಹಮೂದ್‌ರವರು ಘಟಿಕೋತ್ಸವ ಹಾಗೂ ವಿಶ್ವವಿದ್ಯಾಲಯದ ಇತರ ಎಲ್ಲಾ ಕೆಲಸಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿರುತ್ತಾರೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು